ಶಿ.7 (112)

# ಕರ್ನಾಟಕ ವಿಧಾನ ಪರಿಷತ್ತು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಎಂ.ಫಾರೂಖ್, ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ.ಟಿ.ಶ್ರೀಕಂಠೇಗೌಡ ಹಾಗೂ ಶ್ರೀ ಎಸ್.ಎಲ್.ಭೋಜೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

## ಸೂಚನೆ

ಮಂಗಳೂರು ತಾಲೂಕು, ಉಲ್ಲಾಳ ನಗರ ಸಭೆ ವ್ಯಾಪ್ತಿಯಲ್ಲಿ ಮಲಿನ ನೀರು ಶುದ್ಧೀಕರಣ ಘಟಕ (STP) ಅಳವಡಿಸಲು ಹಾಗೂ ವೆಟ್‌ವೆಲ್ ನಿರ್ಮಿಸುವ ಕೆಲಸ ಪ್ರಾರಂಭವಾಗಿದ್ದು, ಇದರ ಸುತ್ತಮುತ್ತಲೂ ಆಸ್ಪತ್ರೆ, ಶಾಲೆ, ಮಸೀದಿ. ದೇವಸ್ಥಾನ ಹಾಗೂ ಹೆಚ್ಚಿನ ಜನರು ವಾಸವಾಗಿರುವುದರಿಂದ ಬಹಳ ತೊಂದರೆಗೀಡಾಗಿರುವುದು ಮತ್ತು ಈ ಕೆಲಸ ತರಾತುರಿಯಲ್ಲಿ ಯಾವುದೇ ಸ್ಥಳೀಯ ಸಂಸ್ಥೆಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (NOC) ತೆಗೆದುಕೊಳ್ಳದೆ ಕೆಲಸ ನಡೆಯುತ್ತಿದೆ. ಸರ್ಕಾರ ಈ ಪ್ರಾಜೆಕ್ಟ್ ಮಾಡಲು ಉಳ್ಳಾಲ ನಗರ ಸಭೆ, ಪರಿಸರ ನಿಯಂತ್ರಣ ಮಂಡಳಿ, CRZ ಹಾಗೂ ಇನ್ನಿತರ ಸ್ಥಳೀಯ ಸಂಸ್ಥೆಗಳನ್ನು ಕೆಲಸ ಪ್ರಾರಂಭಿಸುವ ಮುನ್ನ (NOC) ತೆಗೆದುಕೊಂಡಂತೆ ಕಂಡು ಬರುವುದಿಲ್ಲ. ಈ ಕೆಲಸವನ್ನು ತರಾತುರಿಯಲ್ಲಿ ಪ್ರಾರಂಭ ಮಾಡಿದ್ದು, ಸ್ಥಳಿಯ ಜನರಿಗೆ ಆಗುವ ತೊಂದರೆಗಳು ಹಾಗೂ ಪರಿಸರದ ಮೇಲೆ ಆಗುವ ದುಷ್ಪರಿಣಾಮದ ಬಗ್ಗೆ ಸಮಗ್ರ ಅಧ್ಯಯನ ನಡೆಸಿಲ್ಲ, ಈ ಮಲಿನ ನೀರು ಪೂರ್ಣ ಶುದ್ಧೀಕರಣ ಮಾಡದೆ ಸಮುದ್ರಕ್ಕೆ ಬಿಡಲು ನಿರ್ಧರಿಸಿರುವುದು ಸಾರ್ವಜನಿಕರಿಗೆ ಹೆಚ್ಚಿನ ಆತಂಕವಿದ್ದು, ಸರ್ಕಾರ ಈ ಬಗ್ಗೆ ಗಮನ ಹರಿಸಿಲ್ಲ. ಇಂತಹ ಕಲುಷಿತ ನೀರಿನಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮ ಹಾಗೂ ಮೀನುಗಳ ಮಾರಣಹೋಮ ಬಗ್ಗೆ ಜನರ ಆಕ್ರೋಶವಿದೆಯೆಂದು ಸರ್ಕಾರಕ್ಕೆ ತಿಳಿದಿದ್ದರೂ ಸಹ ಸಮುದ್ರದ ಮೀನನ್ನು ನಂಬಿರುವ ಮೀನುಗಾರರ ಬಗ್ಗೆ ಯಾವುದೇ ಮುನ್ನೆಚ್ಚರಿಕೆಯನ್ನು ಸರ್ಕಾರ ವಹಿಸದೆ ಇರುವುದರಿಂದ".

## ಉತ್ತರ

ಉಳ್ಳಾಲ ಪಟ್ಟಣವು ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿದ್ದು, ಅರಬ್ಬೀ ಸಮುದ್ರದ ತೀರದಲ್ಲಿರುತ್ತದೆ. ಪಟ್ಟಣದ ಜನಸಂಖ್ಯೆಯು 2011ರ ಜನಗಣತಿಯ ಪ್ರಕಾರ 53773 ಇದ್ದು ಪ್ರಸ್ತುತ ಅಂದಾಜು 60000 ಇರುತ್ತದೆ. ಉಳ್ಳಾಲ ಪಟ್ಟಣಕ್ಕೆ ಹಾಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಈ ಪಟ್ಟಣದ ತ್ಯಾಜ್ಯ ನೀರು ಮತ್ತು ಮಳೆ ನೀರು ತೆರೆದ ಚರಂಡಿಗಳಲ್ಲಿ ಹರಿಯುತ್ತಿದ್ದು, ಪಟ್ಟಣದ ಪರಿಸರವು ಹಾಳಾಗುತ್ತಿದೆ ಹಾಗೂ ಇದು ಸಮುದ್ರವನ್ನು ಸೇರುತ್ತಿದೆ.

ಉಳ್ಳಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸದಿರುವ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 4861/2007 (OM-CPC) ರ ಪ್ರಕರಣವನ್ನು ಇತ್ಯರ್ಥ ಪಡಿಸುವ ಸಲುವಾಗಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ

ಮಂಡಳಿ ವತಿಯಿಂದ ಉಳ್ಳಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ೧ ಜನೆಯ ಅಂದಾಜುಪಟ್ಟಿಯನ್ನು ತಯಾರಿಸಲಾಗುತ್ತಿದೆಯೆಂದು ದಿನಾಂಕ: 21-01-2009 ರಂದು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಿದೆ.

ಈ ಯೋಜನೆಯನ್ನು 2009-10ನೇ ಸಾಲಿನ ದರಪಟ್ಟಿಯಂತೆ ರೂ.6571.00 ಲಕ್ಷಗಳಿಗೆ ತಯಾರಿಸಲಾಗಿದ್ದು, ಸ್ಥಳೀಯ ಸಂಸ್ಥೆಯಿಂದ ಠರಾವು ಪಡೆಯಲಾಗಿದೆ. ಈ ಯೋಜನೆಗೆ ದಿನಾಂಕ 23-06-2009 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಲ್ಲದೇ, ಯೋಜನೆಯಡಿ ಘಟಕಗಳ ನಿರ್ಮಾಣಕ್ಕೆ ರಾಜ್ಯ ಪರಿಸರ ನಿಯಂತ್ರಣ ಮಂಡಳಿಯು ದಿನಾಂಕ: 18-5-2012 ರಂದು ಒಪ್ಪಿಗೆ ನೀಡಿರುತ್ತಾರೆ. ಸದರಿ ಕಾಮಗಾರಿಗೆ ದಿನಾಂಕ: 30-05-2009 ರಂದು ಉಳ್ಳಾಲ ಪುರಸಭೆ ಕಛೇರಿಯ ಸಭಾಂಗಣದಲ್ಲಿ ಪುರಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯ ನಡವಳಿಯ ಪ್ರಕಾರ ಯೋಜನೆಗೆ ಒಪ್ಪಿಗೆ ನೀಡಲಾಗಿದೆ. ಸದರಿ ಯೋಜನೆಯಡಿ ಸೀವರ್‌ಲೈನ್ ಮತ್ತು ಆರ್.ಸಿ.ಸಿ ಮಡಿನ್ ಹೋಲ್‌ಗಳನ್ನು ಅಳವಡಿಸುವ ಕಾಮಗಾರಿಗೆ ಟೆಂಡರ್ ಕರೆದು ಸುಮಾರು 60.50 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗ ಮತ್ತು 2228 ಆರ್.ಸಿ.ಸಿ ಮಡಿನ್ ಹೋಲ್‌ಗಳನ್ನು ಅಳವಡಿಸಲಾಗಿದೆ. ಆದರೆ, ಸದರಿ ಯೋಜನೆಯಡಿ ನಿರ್ಮಿಸಬೇಕಾದ 8 ವೆಟ್‌ವೆಲ್‌ಗಳು ಹಾಗೂ 2 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಜಾಗಗಳನ್ನು ಸ್ಥಳೀಯ ಸಂಸ್ಥೆಯು ಹಂಸ್ತಾಂತರಿಸದ ಕಾರಣ ಸುಮಾರು 10 ವರ್ಷಗಳ ನಂತರ ಉಳಿದ ಕಾಮಗಾರಿಗಳಿಗೆ ಟೆಂಡರ್ ಕರೆದು ಗುತ್ತಿಗೆಯನ್ನು ದಿನಾಂಕ: 27.02.2019 ರಲ್ಲಿ ವಹಿಸಲಾಗಿದೆ. 8 ವೆಟ್‌ವೆಲ್‌ಗಳು ಹಾಗೂ 2 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಪ್ರಸ್ತುತ ಸ್ಥಿತಿ ಈ ಕೆಳಗಿನಂತಿವೆ;

- 3 ವೆಟ್ ವೆಲ್‌ಗಳ (ಬಂಡಿಕೊಟ್ಯ, ತೊಕೊಟ್ಟು, ಕೋಡಿ ಕೋಟೆಪುರ) ಹಾಗೂ 1 6.6 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಕಾಮಗಾರಿಗಳು ಪ್ರಗತಿಯಲ್ಲಿವೆ (ಕೋಡಿ ಕೋಟೆಪುರ ಬಳಿ).
- 2 ವೆಟ್ ವೆಲ್‌ಗಳ (ಹೊಸ ಗದ್ದೆ, ಕಲ್ಲಾಪು ಬುರ್ದು) ಹಾಗೂ 1 2.5 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಗುರುತಿಸಿದ ಜಾಗಕ್ಕೆ ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ.
- 3 ವೆಟ್ ವೆಲ್‌ಗಳ (ಕೈಕೋ ಸುಭಾಸ್‌ನಗರ, ಕಲ್ಲಾಪು ಮೊನೆಪು ಕಲ್ಲಾಪು ಉರ್ದು ಶಾಲೆ ಬಳಿ) ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧ ಇರುತ್ತದೆ.

ಮೇಲಿನ ಘಟಕಗಳ ಪೈಕಿ ಈ 2 ಜಾಗಗಳು CRZ II ವ್ಯಾಪ್ತಿಗೆ ಬರುತ್ತವೆ:

1. ಕೋಡಿ ಕೋಟೆಪುರ
2. ಕೈಕೋ ಸುಭಾಸ್‌ನಗರ

ಸದರಿ ವಿಷಯದ ಬಗ್ಗೆ ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಸಮಿತಿಯು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣ ಪ್ರಾಧಿಕಾರ, ಬೆಂಗಳೂರು ರವರಿಗೆ ಉಳ್ಳಾಲ ಒಳಚರಂಡಿ ಯೋಜನೆಯಡಿ ಉದ್ದೇಶಿಸಲಾಗಿರುವ ಘಟಕಗಳ ನಿರ್ಮಾಣಕ್ಕೆ ನಿರಾಕ್ಷೇಪಣ ಪತ್ರ ನೀಡಬಹುದಾಗಿ ಶಿಫಾರಸ್ಸು ಮಾಡಿರುತ್ತದೆ. ತದನಂತರ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ: 4-3-2021 ರಂದು ನಡೆದ ಸಭೆಯಲ್ಲಿ ಪುನ: ಯೋಜನೆಯಲ್ಲಿ ಉದ್ದೇಶಿಸಿರುವ ಎಲ್ಲಾ ಘಟಕಗಳ ಸ್ಥಳಗಳ ಮತ್ತು ಕಾರ್ಯದ ಬಗ್ಗೆ ಹಾಗೂ ಉಳ್ಳಾಲ ನಗರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರಿನಿಂದ ಪರಿಸರ ಹಾಗೂ ಸಮುದ್ರದ ರಕ್ಷಣೆಯ ದೃಷ್ಠಿಯಿಂದ ಅನುಮತಿ ನೀಡುವ ಬಗ್ಗೆ ಚರ್ಚಿಸಲಾಯಿತು. ಸದರಿ ಸಭೆಯ ನಡವಳಿಯನ್ನು ನಿರೀಕ್ಷಿಸಲಾಗಿದೆ. ಸದರಿ ಯೋಜನೆಯ ಘಟಕಗಳಿಗೆ ಅವಶ್ಯವಿರುವ ಜಮೀನು ಮಂಡಳಿಗೆ ಹಸ್ತಾಂತರಗೊಂಡ ನಂತರ 18 ತಿಂಗಳೊಳಗೆ ಯೋಜನೆಯನ್ನು ಅನುಷ್ಠಾನಗೊಳಿಸಿ ಚಾಲನೆಗೊಳಿಸಲಾಗುವುದು.

**ಸಂಖ್ಯೆ : ನಅಇ 57 ಯುಎಂಎಸ್ 2021**

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು